

ಇನ್ನೂ ಕೆಲವರು ವರ್ಷಕ್ಕೆ ಸೇರಿಗೆ ಅಚ್ಚೇರು ಎನ್ನುವ ಬಡ್ಡಿ ಲೆಕ್ಕದಲ್ಲಿ ಬದಲು ಕೊಟ್ಟಿದ್ದರು. ಆದರೆ ಮುದ್ದಜ್ಜನಂಥ ಮೊಂಡು ಧೈರ್ಯದವರು ಮಾತ್ರ ಬಿತ್ತನೆ ಮಾಡಿದ್ದರು.

ಮನುಷ್ಯ ಎಷ್ಟೇ ತಿಪ್ಪರಲಾಗ ಹಾಕಿದರೂ ತನ್ನ ಗುಟ್ಟು ಬಿಟ್ಟುಕೊಡದ ನಿಸರ್ಗ, ಕೆಲವೊಮ್ಮೆ ಆಸೆಬುರುಕ ಮನುಷ್ಯನ ಗುಣಾಕಾರವನ್ನೇ ತಲೆ ಕೆಳಗೆ ಮಾಡಲು ಸಂಚು ಹೂಡಿರುತ್ತದೆನ್ನುವುದನ್ನು ಆಗಾಗ ರುಜುವಾತುಪಡಿಸುತ್ತಲೇ ಇರುತ್ತದೆ. ಅಸ್ಲಿ ಮಳೆ ಬಿಸ್ಲಾಗೆ ಹೋಗುತ್ತೆ ಎಂದುಕೊಂಡ ಜನರ ಊಹೆಯನ್ನೆ ಹುಸಿ ಮಾಡಿ ಎರಡು ಸಲ ಹದವಾದ ಮಳೆಯಾಗಿದ್ದರಿಂದ ಕೊರೆಜೀವ ಹಿಡಿದುಕೊಂಡು ಕುಡಿಯೊಡೆದಿದ್ದ ಶೇಂಗಾ ಗಿಡ ತೆಪ್ಪರಿಸಿಕೊಂಡು ಹೊಲಗಳಲ್ಲಿ ಕಿಲಕಿಲ ನಗುತ್ತಿದ್ದವು. ಮಗಿ ಮಳೇನೂ ಒಂದುಬ್ರ ಹಸಿಯಾಗುವಂತೆ ಬಂದಿದ್ದರಿಂದ ಇನ್ನೇನು ಬಿಡು, ಈ ವರ್ಷ ದಂಡಿ ಫಸಲು ಎನ್ನುವ ಖುಷಿಯ ಹಸಿಯೊಂದಿಗೆ ಎಡೆಕುಂಟೆ ಹೊಡೆದು, ಕಳೆ–ಕಾಸೆ ತೆಗೆಸಿದ ಮೇಲೆ, ಮಳೆಗಾಗಿ ಕಾದು ಕಾದು, ಅದರದೇ ಕನವರಿಕೆಯಲ್ಲಿದ್ದವರ ಕಣ್ಣೇ ಸೋತುಹೋಗಿದ್ದವು. ಶೇಂಗಾಗಿಡ ಊಡು ಇಳಿಯೊ ಹೊತ್ತಲ್ಲಿ ಹದವಾದ ಒಂದು ಮಳೆ ಬರಬೇಕಾಗಿತ್ತು. ಆದರೆ ಹುಬ್ಬೆ ಮಳೆ ಗಬ್ಬದಲ್ಲೆ ಕರಗಿಹೋಗಿತ್ತು. ಒಕ್ಕಲಿಗನಿಗೆ ಮಾತು ಕೊಟ್ಟಿದ್ದ ಉತ್ತರೆ ಮಳೆ ನಾಪತ್ತೆಯಾಗಿದ್ದರಿಂದ ಈ ಸಲಾನೂ ಬಿತ್ತಿದ ಬೀಜ ಭೂಮಿ ಪಾಲಾಗೋದು ಗ್ಯಾರಂಟಿ ಎಂದುಕೊಂಡಾಗ, ಬೊಗಸೆಯಲ್ಲಿ ಹಿಡಿದಿಟ್ಟುಕೊಂಡಿದ್ದ ಹಿಡಿಯೋಟು ಭರವಸೆಯ ನೀರು ಬೆರಳ ಸೊಂದಿನಲ್ಲಿ ಜಾರಿಹೋದಂತಾಗಿತ್ತು.

ನಾಡಿದ್ದು ಉತ್ತರೆ ಮಳೆ ಕೊನೆಯಾಗುತ್ತೆ. ಹೋಗುವುದರೊಳಗೆ ಒಂದಿಷ್ಟು ನೆಲನಾದರೂ ತಂಪುಗೊಳಿಸಿ ಹೋಗಲೆಂದು ಮಳೆರಾಯನನ್ನು ಬೇಡಿಕೊಳ್ಳಲು ವಾಡಿಕೆಯಂತೆ ಇಡೀ ಊರಿನ ಜನ ಗಿಡದ ದೇವರು ಮಾಡುವ ಬಗ್ಗೆ ಒಮ್ಮತದ ತೀರ್ಮಾನ ತೆಗೆದುಕೊಳ್ಳಲು ನಿನ್ನೆ ಸಂಜೆ ಹನುಮಂತರಾಯನ ಗುಡಿಯ ಮೈಕಿನಲ್ಲಿ; 'ಊರಿನ ತೋಟಿ, ತಳವಾರ, ಗೌಡ, ಗೊಂಚಿಗಾರ, ಕುಲವನ್ನೆಲ್ಡು ಜಾತಿಯ ಮುಖಂಡರಿಗೆ ತಿಳಿಸೋದೇನೆಂದರೆ, ನಾಳೆ ಹೊರಬೀಡು ಹೋಗೊ ವಿಚಾರ ಮಾತಾಡಲು ರಾತ್ರಿ ಒಂಬತ್ತು ಗಂಟೆಗೆಲ್ಲ ಪಾದಗಟ್ಟೆ ಹತ್ತಿರ ಬರಬೇಕೆಂದು' ಮೂರು ಸಲ ಅನೌನ್ಸ್ ಮಾಡಿದ್ದರಿಂದ ಮುದ್ದಜ್ಜನಾದಿಯಾಗಿ ಊರಿನ ಪ್ರಮುಖರೆಲ್ಲ ಪಾದಗಟ್ಟೆ ಹತ್ತಿರ ಕೂಡು ಗುಂಪ್ಲಾದರು.

'ಹೋದ ವರ್ಷ ಅನ್ನೋದಕ್ಕಿಂತ, ಅತ್ಲು ವರ್ಷಾನು ಇದೇ ಟೈಮಿಗೆ ಮಳೆ ಕೈಕೊಟ್ಟಿದ್ದರಿಂದ, ಕೈಗೆ ಬಂದ ತುತ್ತು ಬಾಯಿಗೆ ಬರ್ದಂಗಾಗಿತ್ತು. ಬೀಜ, ಗೊಬ್ರ, ಕುಂಟೆ, ಕೂರಿಗೆ ಕಳೆಕಾಸೆಗಂತ ಖರ್ಚು ಮಾಡಿದ ಬಂಡವಾಳನೂ ಹಿಂದಕ್ಕೆ ಬರಲಿಲ್ಲ. ಈ ಸಲನೂ ಅದೇ ತರ ಕೈಕೊಡಂಗೆ ಕಾಣ್ಸೈತೆ. ನಾಡಿದ್ದು ಉತ್ರೆ ಮಳೆ ಹೋಗುತ್ತೆ. ಹೋಗೋದ್ರೊಳಗೆ ಒಂದಿಷ್ಟು ಕರುಣೆ ತೋರಿಸಬೇಕಂದ್ರೆ, ನಾಳೆ ನಾವೆಲ್ಲ ಗಿಡದ ದೇವರು ಮಾಡಿ ಮಳೇನ ಬೇಡಿಕೊಳ್ಳಬೇಕು. ಇದ್ಕೆಲ್ಲ ನಿಮ್ಮ ಒಪ್ಪಿಗೆ ಇದೆಯೇನ್ರಪ್ಪ' ಅಂತೇಳಿ ಮುದ್ದಜ್ಜ ಊರಿನ ಉಳಿದ ಮುಖಂಡರನ್ನ ಕೇಳಿದ.

'ಊರಿಗೆ ಒಳ್ಳೆಯದಾಗೊ ಕೆಲಸಕ್ಕೆ ಯಾರು ಬ್ಯಾಡಂತಾರೆ ಮುದ್ದಜ್ಜ, ಮಾಡಾನೇಳ್ರಿ' ಎಂದು ಗ್ರಾಮ ಪಂಚಾಯಿತಿ ಹಾಲಿ ಮೆಂಬರ್ ರಂಗಸ್ವಾಮಿ ಹೇಳಿದಾಗ, ಆತನ ಮಾತಿಗೆ ಅನುಬಲವಾಗಿ ಎಲ್ಲರೂ ಒಂದೇ ಮಾತಿಗೆ ಒಪ್ಪಿಗೆ ನೀಡಿದ್ದು ಕೇಳಿ, ಮುದ್ದಜ್ಜನಿಗೆ ಆಶ್ಚರ್ಯವಾಗಿತ್ತು.

ಆದರೆ ಮುದ್ದಜ್ಜನ ಕಿರಿಮಗ ಮೋಹನನಿಗೆ, ಊರ ಜನರೆಲ್ಲ ಸೇರಿ ಮಾಡೊ ಈ ಗಿಡದ ದೇವರ ಆಚರಣೆ ಬಗ್ಗೆ ಆಸಕ್ತಿ ಇರಲಿಲ್ಲ. ಯಾರಿಗೂ ಕಾಣದಂತೆ ಬೇರಿಗೆ ಬಿಸಿನೀರುಗ್ಗಿ; 'ಗಿಡ ಯಾಕೊ ಬಾಡಿ ಹೋಗ್ತಾ ಇದೆ' ಅಂತೇಳಿ ಬೆರಗಿನ ಮಾತಾಡೊ ಜನರನ್ನ ಕಂಡು ಮತ್ತಷ್ಟು ವ್ಯಗ್ರನಾಗಿದ್ದ. 'ಕಪ್ಪೆಗಳ ಮದುವೆ, ಕತ್ತೆಗಳ ಮೆರವಣಿಗೆ, ಗಿಡದ ದೇವರು ಮಾಡಿದರೆ ಮಳೆ ಬರಲ್ಲ. ಕಲ್ಲು ಗಣಿಗಾರಿಕೆಗೆ ಕರಗ್ತಿರೊ ಬೆಟ್ಟಗುಡ್ಡಾನ ಉಳಿಸಿದರೆ, ಬೆದ್ಲು ಹೊಲದ ಬದುವಿನಲ್ಲಿ, ಹಾದಿ ಮಗ್ಗಿಗೆ ದಂಡಿಯಾಗಿ ಗಿಡಮರ ಬೆಳೆಸಿದರೆ, ಓಡೋ ಮೋಡ ತಡೆದು ಮಳೆನಾದ್ರು ಸುರಿಸುತ್ತೆ. ಎತ್ಲಾಗೆ ನೋಡಿದರೂ ಬಟಾಬಯಲು ಐತೆ. ಯಂಗೆ ಬೀಸಿದ ಗಾಳಿಗೆ ಅಂಗಂಗೆ ಮೋಡಗಳು ಚದುರಿ ಹೋಗ್ತಾ ಇದಾವೆ, ಮಳೆ ಬಾ ಅಂದ್ರೆ ಯಾವ ಮಕನಾಗಿ ಬರುತ್ತೆ' ಅಂತೇಳಿ ಮೋಹನ ಗಿಡದ ದೇವರ ಬಗ್ಗೆ ಅಪಸ್ವರ ಎತ್ತಿದ.

ಮೋಹನ ಬಿಯೆಸ್ಸಿ ಅಗ್ರಿಕಲ್ಚರ್ ಓದಿಕೊಂಡಿರೊ ಹುಡುಗ. ವ್ಯವಸಾಯವನ್ನು ಆಧುನೀಕರಣಗೊಳಿಸಿ, ಮಣ್ಣಿನ ಫಲವತ್ತತೆ ಹೆಚ್ಚಿಸಿ, ಉತ್ತಮ ಇಳುವರಿ ತೆಗೆಯಬೇಕೆಂಬ ಹಂಬಲದಲ್ಲಿ ಏನೇನೊ ಕನಸು ಕಾಣುತ್ತಾ ಹಳ್ಳಿಗೆ ಬಂದವನು. ಮಣ್ಣಿನ ಜೊತೆ ಒಡನಾಡಿದಾಗ ಗೊತ್ತಾಯಿತು; ಮಳೆಯ ಜೂಟಾಟದ ಜೊತೆಗೆ ರೈತರ ಬದುಕನ್ನ ಮೂರಾಬಟ್ಟೆ ಮಾಡೋ ದಲ್ಲಾಳಿ ಎಂಬ ಬೇರುಹುಳುಗಳ ಕಾಟ ಜಾಸ್ತಿಯಿದೆ ಅನ್ನೋದು. ಆ ವ್ಯವಸ್ಥೆಯನ್ನು ಸರಿಪಡಿಸಲಾಗದ ಅಸಹಾಯಕತೆಯಲ್ಲಿ ಜಮೀನನ್ನೇ ಮಾರಬೇಕನ್ನೊ ಹಂತಕ್ಕೆ ಬಂದಿದ್ದ. ಅದೆಲ್ಲವನ್ನು ಬಲ್ಲ ಊರಿನ ಜನರು ಮೋಹನ ಹೇಳಿದ್ದು ಸರಿಯೆನಿಸಿ ಗಂಭೀರವಾಗಿರುವಾಗ, ಒಂದು ಕಡೆ ಕುಂಡೇನ ವಾರೆ ಮಾಡಿ, ಹಳೆ ಹೆಚ್.ಎಂ.ಟಿ. ಟ್ರ್ಯಾಕ್ಟ್ರಿ ವಟರುಗುಟ್ಟಿಸಿದಂಗೆ ಹೂಸು ಬಿಟ್ಟ ಗ್ರಾಮ ಪಂಚಾಯಿತಿ ಮಾಜಿ ಮೆಂಬರ್ ಮೈಲಾರಪ್ಪ; 'ಗಿಡ ಏನೊ ನೆಡ್ತೀವಿ ಮೋಹನ, ಅವುಕ್ಕೆ ನೀರೆಲ್ಲಿಂದ ತರಬೇಕು ಹೇಳು? ಕುಡಿಯೋಕೆ ನೀರು ಸಿಗಾದೆ ಬಂಡಾಟ ಆಗಿರುವಾಗ...' ಎಂದು ಹೇಳಿದ. ಆತನ ಮಾತು ಯಾರಿಗೂ ಕೇಳದಷ್ಟು ಜೋರಾಗಿ ನೆರೆದ ಜನ ನಗುತ್ತಿದ್ದರು.

'ಹತ್ತು ಸಾವಿರ ಎಕರೆಯಷ್ಟಿದ್ದ ಅಮೃತ್ ಮಹಲ್ ಕುರುಚಲು ಕಾಡನ್ನೇ ಉಳಿಸಿಕೊಳ್ಳಲಾಗದ ನಾವು ಹೊಸದಾಗಿ ಗಿಡ ನಡ್ತೀವಾ ಮೋಹನ? ಅಭಿವೃದ್ಧಿ ಹೆಸರಿನಲ್ಲಿ ಫಲವತ್ತಾದ ನೆಲ–ನೀರನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಬಿಕರಿಗಿಟ್ಟಿರುವಾಗ, ಈ ನೆಲದ ರೈತನ ಬಗ್ಗೆ ಯಾರಿಗೆ ನಿಜವಾದ ಕಾಳಜಿಯಿದೆ ಹೇಳು? ಬರೀ ಬೂಟಾಟಿಕೆಯ ಬಣ್ಣದ ಮಾತಾಡ್ತಾರೆ ಬೋಳಿ ಮಕ್ಳು...' ಎಂದು ಕಾಮ್ರೇಡ್ ಕರಿಯಣ್ಣ ಖಾರವಾಗಿ ಮಾತಾಡಿದಾಗ ಕ್ಷಣ ಕಾಲ ಪಂಚಾಯಿತಿ ಕಟ್ಟೆ ಸ್ತಬ್ಧವಾಗಿತ್ತು.

'ನೀನು ಹೇಳಿದ್ದು ತಗಂಬ ಮಾತೆ. ಆದ್ರೆ ಇದು ಸೂಕ್ತವಾದ ಸಮಯ ಅಲ್ಲ ಕರಿಯಣ್ಣ. ನಾವು ಮೊದ್ಲು, ಈಗ ತತ್ಕಾಲಕ್ಕೆ ಏನು ಮಾಡಬೇಕೊ ಅದ್ನ ಯೋಚ್ನೆ ಮಾಡಿದಿವಿ. ನಾಳೆ ಗಿಡದ ದೇವರು ಮಾಡೋಕೆ ಹೊರಬೀಡು ಹೋಗಿ ಬರಾನೆಂದು' ಮುದ್ದಜ್ಜ ಕೊನೆಯದಾಗಿ ಎಂಬಂತೆ ಹೇಳಿದ.

'ಗಿಡದ ದೇವರೇನೊ ಮಾಡ್ತೀವಿ, ಆದರೆ ಪ್ರತಿ ವರ್ಷದಂತೆ ಈ ವರ್ಷನೂ ಕಾವಲಿನ ನಡುವೆ ಇರೋ ಬೊಮ್ಮಲಿಂಗೇಶ್ವರನ ಗುಡಿಗೆ ಹೋಗಿ ಹಣ್ಣುಕಾಯಿ ಮಾಡಿಸಿಕೊಂಡು ಬರೋಕು ಆ ವಿಜ್ಞಾನ ಸಂಸ್ಥೆಯವರ ಅಪ್ಪಣೆ ಬೇಕು. ಮೊದ್ಲು ಅವರ ಹತ್ರ ಪರ್ಮಿಷನ್